ಸಂಯುಕ್ತ ಕರ್ನಾಟಕ



# ಪರಂಪರೆ ಉಳಿವಿಗಾಗಿ ಸೈಕಲ್ ಜಾಥಾ

ನಮ್ಮ ಭಾರತೀಯ ಪರಂಪರೆ ಅಜರಾಮರವಾಗಿ ಉಳಿಯಬೇಕು. ಪರಂಪರೆ ನಶಿಸಿದರೆ ದೇಶಕ್ಕೆ, ನಾಡಿಗೆ ಅರ್ಥವೇ ಇರುವುದಿಲ್ಲ. ಮುಂದಿನ ಎಲ್ಲ ತಲೆಮಾರುಗಳಿಗೆ ನಮ್ಮ ಪರಂಪರೆಯ ಬಗ್ಗೆ ಗೊತ್ತಿರಬೇಕಾದರೆ ಅದು ಉಳಿಯಲೇ ಬೇಕು ಎಂಬ ದೃಷ್ಟಿಯಿಂದ ಎಲ್ಲೆಡೆ ಜಾಗೃತಿ ಮೂಡಿಸಲು ಜೈನ್ ವಿಶ್ವವಿದ್ಯಾಲಯದಸ್ಕೂಲ್ ಆಫ್ ಕಾಮರ್ಸ್,ಮ್ಯಾನೇಜ್‌ಮೆಂಟ್ ವಿಭಾಗದ ಎನ್‌ಸಿಸಿ ವಿದ್ಯಾರ್ಥಿಗಳು ಸುಮಾರು 860 ಕಿಲೋಮೀಟರ್ ವರೆಗೆ ಸೈಕಲ್ ಪೆಡಲ್ ತುಳಿಯುತ್ತಿದ್ದಾರೆ.

ಕಳೆದ 1999ರಿಂದ ಪ್ರತಿವರ್ಷ ಬೇರೆ, ಬೇರೆ ಗುರಿಗಳನ್ನಿಟ್ಟುಕೊಂಡು ಜಾಗೃತಿ ಮೂಡಿಸುವ ಈ ವಿದ್ಯಾರ್ಥಿಗಳು ಈ ಬಾರಿ ಪರಂಪರೆ ಉಳಿಸಲು ಜಾಗೃತಿ ಮೂಡಿಸಲು ಸೈಕಲ್ ಏರಿದ್ದಾರೆ. ಹತ್ತು ಎನ್‌ಸಿಸಿ ಕ್ಯಾಡೆಟ್‌ಗಳು ಆಗಸ್ಟ್ 15 ರಂದು ಸೈಕಲ್ ಹತ್ತಿದರು. ಹೊಸೂರು ಮಾರ್ಗವಾಗಿ ಕೃಷ್ಣಗಿರಿ,ಉತ್ತಾನಗಿರಿ,ತಿರುವಣ್ಣಾಮಲೈ,ತ್ರಿವೇಂದ್ರಮ್, ಅಮ್ಮನೂರು, ಮಹಾಬಲಿಪುರಂ, ಕಾಂಚಿಪುರಂ, ವೆಲ್ಲೂರು, ಪಲಮ್ನೇರ್, ಕೋಲಾರ ಗಳಿಗೆ ಸೈಕಲ್ ಜಾಥಾದಲ್ಲಿ ತೆರಳಲಿದ್ದಾರೆ.

ಇವರು ಹೋಗುವ ಎಲ್ಲ ಊರಿನ ಶಾಲೆಗಳಿಗೆ ಭೇಟಿ ನೀಡಿ ಅಲ್ಲಿನ ಮಕ್ಕಳಿಗೆ ಪರಂಪರೆ, ಇತಿಹಾಸ, ದೇಶದ ಭೌಗೋಲಿಕ ಹಿನ್ನೆಲೆಯಲ್ಲಿ ತಿಳಿಸಿಕೊಡಲಿದ್ದಾರೆ. ಇಂತಹ ಜಾಥಾಗಳಿಂದ ಸಂಚರಿಸಿ ಶಾಲೆಯ ಮಕ್ಕಳಿಗೆ ತಿಳಿಸುವುದೇ ಒಂದು ಅದ್ಭುತ ಅನುಭವ. ನೂರು ವಿದ್ಯಾರ್ಥಿಗಳಲ್ಲಿ ಕನಿಷ್ಟ 50 ವಿದ್ಯಾರ್ಥಿಗಳಿಗಾದರೂ ದೇಶದ ಪರಂಪರೆ, ಇತಿಹಾಸದ ಬಗ್ಗೆ ತಿಳಿದರೆ ಅಷ್ಟೇ ಸಾರ್ಥಕ ಎನ್ನುವುದು ಜಾಥಾ ನಡೆಸುತ್ತಿರುವ ವಿದ್ಯಾರ್ಥಿಗಳ ಅನಿಸಿಕೆ.

ಸ್ವಾತಂತ್ರ್ಯ ದಿನೋತ್ಸವದಂದು ಈ ಜಾಥಾಕ್ಕೆ ಚಾಲನೆ ನೀಡಿದ ಕರ್ನಾಟಕದ ಏಳನೇ ಬಟಾಲಿಯನ್ ನ ಕಮಾಂಡಿಂಗ್ ಅಧಿಕಾರಿ ಕರ್ನಲ್ ಪಿ.ಕೆ. ಸಿಂಗ್ ಮಾತನಾಡಿ ವಿದ್ಯಾರ್ಥಿಗಳಲ್ಲಿ ದೇಶದ ಪರಂಪರೆ, ಇತಿಹಾಸಗಳ ಪರಿಕಲ್ಪನೆ ಬೆಳೆಯುವುದು ತೀರ ಅನಿವಾರ್ಯವಾಗಿದೆ. ವಿದ್ಯಾರ್ಥಿಗಳಿಗೆ ಇಂತಹ ಜವಾಬ್ದಾರಿ ಬರಬೇಕು ಎಂದು ಕಿವಿಮಾತು ಹೇಳಿದರು.

ಜೈನ್‌ವಿವಿ ಕುಲಪತಿ ಡಾ. ಎನ್. ಸುಂದರ್‌ರಾಜನ್ ಮಾತನಾಡಿ ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಕಲಿಯುವಿಕೆಯ ಜೊತೆಗೆ ದೇಶದ ಪರಿಕಲ್ಪನೆಗಳನ್ನಿಟ್ಟುಕೊಂಡಿದ್ದಾರೆ. ದೇಶದ ಪರಂಪರೆ, ಇತಿಹಾಸದ ಜಾಗೃತಿ ಮೂಡಿಸಲು ಈ ಕಾರ್ಯ ಹಮ್ಮಿಕೊಂಡಿರುವುದು ನಿಜಕ್ಕೂ ಸಂತಸ ತಂದಿದೆ ಎಂದರು.